ನಿವೇಶನ ಹಂಚಿಕೆ

501 (759) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಿಂದ ಇಲ್ಲಿಯವರೆವಿಗೆ ಬೀದರ್ ಜಿಲ್ಲೆಯ ವಿವಿಧ ಕೃಷಿ ಮಾರುಕಟ್ಟೆ ಪ್ರಾಂಗಣದಲ್ಲಿ ವ್ಯಾಪಾರಿಗಳಿಗೆ/ ಹಮಾಲರಿಗೆ ಎಷ್ಟು ನಿವೇಶನ/ಮನೆಗಳನ್ನು ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ; ಇವುಗಳ ಮಾರುಕಟ್ಟೆ ದರ ಎಷ್ಟು; ಇದಕ್ಕಾಗಿ ಇಲ್ಲಿಯವರೆವಿಗೆ ಎಷ್ಟು ಫಲಾನುಭವಿಗಳು ಅರ್ಜಿ ಸಲ್ಲಿಸಿ ಹಣ ಪಾವತಿ ಮಾಡಿದ್ದಾರೆ (ಅರ್ಜಿದಾರರ ಹೆಸರು ವಿವರಗಳನ್ನು ಮಾರುಕಟ್ಟೆವಾರು ಅಂಕಿ ಅಂಶಗಳಲ್ಲಿ ಒದಗಿಸುವುದು);

ಆ) ಯಾವ್ಯಾವ ಕೃಷಿ ಮಾರುಕಟ್ಟೆ ವ್ಯಾಪ್ತಿಯಲ್ಲಿ ನಿವೇಶನ/ಮನೆ ಹಂಚಿಕೆಯ ಬಗ್ಗೆ ದೂರುಗಳು ಬಂದಿವೆ;

ಇ) ಈ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) ಬೀದರ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರವ ಔರಾದ್, ಭಾಲ್ಕಿ, ಹುಮ್ನಾಬಾದ್, ಬಸವಕಲ್ಯಾಣ, ಬೀದರ್ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಸಂಬಂಧಿಸಿದ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಹುಮ್ನಾಬಾದ್ ಮಾರುಕಟ್ಟೆ ಸಮಿತಿಯ ನಿವೇಶನ ಹಂಚಿಕೆ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ದೂರು ಬಂದಿದ್ದು, ಪರಿಶೀಲಿಸಿ ಸಮಿತಿ ಪ್ರ ಸ್ತಾವನೆ ತಿರಸ್ಕರಿಸಿದೆ.

ಇ) ಹೊಸದಾಗಿ ಪ್ರಕಟಣೆ ನೀಡಿ ಅರ್ಜಿ ಆಹ್ವಾನಿಸಿ ನಿಯಮಾನುಸಾರ ಪ್ರಸ್ತಾವನೆ ಮರು ಸಾದರಪಡಿಸಲು ಹುಮ್ನಾಬಾದ್ ಸಮಿತಿಗೆ ಸೂಚನೆ ನೀಡಲಾಗಿದೆ.

ಅನುಬಂಧ

ಬೀದರ್ ಜಿಲ್ಲೆಯ ವಿವಿಧ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಕಳೆದ 3 ವರ್ಷಗಳಲ್ಲಿ ಹಾಗೂ ಇಲ್ಲಿಯವರೆಗೆ ನಿವೇಶನ/ಮನೆಗಳನ್ನು ಹಂಚಿಕೆ ಮಾಡಿರುವುದಕ್ಕೆ ಸಂಬಂಧಿಸಿದ ವಿವರ.

<table>
<tr><th>ಹಂಚಿಕೆ ಊರು</th><th>ನಿವೇಶನ ಹಂಚಿಕೆ</th><th>ಹಮಾಲರಿಗೆ ವಸತಿಗೃಹ ಹಂಚಿಕೆ</th><th colspan="3">ಮಾರುಕಟ್ಟೆ ದರ</th><th>ಷರಾ</th></tr>
<tr><td></td><td>ಇಲ್ಲ</td><td>ಇಲ್ಲ</td><td colspan="3">–</td><td>–</td></tr>
<tr><td></td><td>ಇಲ್ಲ</td><td>ಇಲ್ಲ</td><td colspan="3">ನಿವೇಶನ ಹಂಚಿಕೆ ದರ ಪ್ರತಿ ಚದರಡಿಗೆ ರೂ.40/– ರಂತೆ ನಿಗಧಿಪಡಿಸಿದೆ.</td><td>118 ನಿವೇಶನ ಹಂಚಿಕೆಗೆ ಉದ್ದೇಶಿಸಿದೆ.</td></tr>
<tr><td rowspan="8">ಹುಮ್ನಾಬಾದ್</td><td rowspan="8">ಮು.ಮಾ.ಪ್ರಾಂ.ದಲ್ಲಿ 07 ಮೂಲೆ ನಿವೇಶನಗಳನ್ನು ಬಹಿರಂಗ ಹರಾಜು ಮೂಲಕ ಹಂಚಿಕೆ ಮಾಡಿದೆ.</td><td rowspan="8">ಮುಖ್ಯ ಮಾರುಕಟ್ಟೆ ಪ್ರಾಂಗಣ ದಲ್ಲಿ 7 ಹಮಾಲರಿಗೆ 20*20 ಅಳತೆ ನಿವೇಶನ ಹಂಚಿಕೆ ಮಾಡ ಲಾಗಿದೆ. ರೂ.4000/ –ರಂತೆ ಪ್ರತಿಯೊಬ್ಬ ರಿಂದ ಪಡೆಯ ಲಾಗಿದೆ.</td><td>ನಿವೇಶನ ಸಂ:</td><td>ಸಮಿತಿ ನಿಗಧಿ ಪಡಿಸಿದ ದರ</td><td>ಬಿಡ್ ನಲ್ಲಿ ಬಂದ ದರ</td><td rowspan="8">ಮು.ಮಾ.ಪ್ರಾಂ. ದಲ್ಲಿ 19, ದುಬಲಗುಂಡಿ ಉ.ಮಾ. ಪ್ರಾಂ. ದಲ್ಲಿ 60 ನಿವೇಶನಗಳಿಗೆ ಹಂಚಿಕೆ ಮಾಡಲು ಸಮಿತಿ ಕ್ರಮ ಕೈಗೊಂಡಿದ್ದು, 80 ಅರ್ಜಿಗಳು ಬಂದಿದೆ. ದೂರುಗಳು ಬಂದಿದ್ದು ಪರಿಶೀಲಿಸಿ ಸಮಿತಿ ಪ್ರಸ್ತಾವನೆ ತಿರಸ್ಕರಿಸಿದೆ. ಹೊಸದಾಗಿ ಪ್ರಕಟಣೆ ನೀಡಿ ಅರ್ಜಿ ಆಹ್ವಾನಿಸಿ ನಿಯಮಾನು ಸಾರ ಪ್ರಸ್ತಾವನೆ ಮರು ಸಾದರಪಡಿಸಲು ತಿಳಿಸಿದೆ.</td></tr>
<tr><td>52</td><td>60,000</td><td>101000</td></tr>
<tr><td>53</td><td>60,000</td><td>105000</td></tr>
<tr><td>56</td><td>60,000</td><td>108000</td></tr>
<tr><td>57</td><td>82,800</td><td>110000</td></tr>
<tr><td>61</td><td>82,800</td><td>110000</td></tr>
<tr><td>62</td><td>82,800</td><td>110000</td></tr>
<tr><td>66</td><td>82,800</td><td>100000</td></tr>
<tr><td></td><td>ಚಿಟಗುಪ್ಪ ಉ.ಮಾ. ಪ್ರಾಂ.ದಲ್ಲಿ 01 ಮೂಲೆ ನಿವೇಶನ ಹಾಗೂ 07 ಖಾಳಿ ನಿವೇಶನ ಹಂಚಿಕೆ ಮಾಡಿದೆ.</td><td>ಇಲ್ಲ</td><td colspan="3">01 ಮೂಲೆ ನಿವೇಶನ, ಸಮಿತಿ ದರ ರೂ.21,000/–, ಬಿಡ್ ದರ ರೂ.90,000/–, ಚಿಟಗುಪ್ಪ ಉ.ಮಾ. ಪ್ರಾಂ, ಪ್ರತಿ ಚದರಡಿಗೆ ರೂ.30/–. ಮು.ಮಾ.ಪ್ರಾಂ. ಹುಮನಾಬಾದ್ ಪ್ರತಿ ಚದರಡಿಗೆ ರೂ.40/– ದುಬಲಗುಂಡಿ ಉ.ಮಾಪ್ರಾಂ. ರೂ.30/–.</td></tr>
</table>

ಬಸವ ಕಲ್ಯಾಣ	ಇಲ್ಲ	ಇಲ್ಲ	ಮು.ಮಾ.ಪ್ರಾಂಗಣ ರೂ.74/– ಪ್ರತಿ ಚ.ಅಡಿಗೆ, ಹುಲಸೂರು ಉಪ ಮಾರುಕಟ್ಟೆ ಪ್ರಾಂಗಣ ರೂ.45/– ಪ್ರತಿ ಚ.ಅಡಿಗೆ.	ಹುಲಸೂರು ಉಪ ಮಾರುಕಟ್ಟೆ ಪ್ರಾಂಗಣದಲ್ಲಿ 51 ನಿವೇಶನ ಹಂಚಿಕೆಗೆ ಉದ್ದೇಶಿಸಿದೆ.
ಬೀದರ್	ಇಲ್ಲ	ಇಲ್ಲ	ಪ್ರತಿ ಚದರಡಿಗೆ ರೂ.375/– ರಂತೆ ನಿಗಧಿಪಡಿಸಿದೆ.	ಪ್ರಸ್ತುತ 42 ನಿವೇಶನಗಳು ಹಂಚಿಕೆಗೆ ಉದ್ದೇಶಿಸಿ ಟೆಂಡರ್ ಪ್ರಕಟಣೆ ನೀಡುವ ಹಂತದಲ್ಲಿದೆ.

ಖೈದಿಗಳ ಬಿಡುಗಡೆ

503 (761) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ತೋಟಗಾರಿಕೆ ಹಾಗೂ ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಜೈಲುಗಳನ್ನು ಜೀವಾವಧಿ ಶಿಕ್ಷೆಯನ್ನು ಅನುಭವಿಸುತ್ತಿರುವ ಎಷ್ಟು ಜನ ಖೈದಿಗಳನ್ನು ಸನ್ನಡತೆಯ ಆಧಾರದ ಮೇಲೆ ಬಿಡುಗಡೆ ಮಾಡಲು ಸರ್ಕಾರ ನಿರ್ಧರಿಸಿದೆ, ಈ ದಿಸೆಯಲ್ಲಿ ಇಲ್ಲಿಯವರೆವಿಗೆ ಸಾಧಿಸಿರುವ ಪ್ರಗತಿ ಏನು?

ಆ) ರಾಜ್ಯ ಸರ್ಕಾರದ ನಿರ್ಧಾರದ ಹಿನ್ನೆಲೆಯಲ್ಲಿ ರಾಜ್ಯದ ಯಾವ ಯಾವ ಜೈಲುಗಳಿಂದ ಎಷ್ಟೆಷ್ಟು ಖೈದಿಗಳು ಅವಧಿಪೂರ್ವ ಬಿಡುಗಡೆ ಯಾಗಲಿದ್ದಾರೆ, ಇವರು ಎಷ್ಟೆಷ್ಟು ವರ್ಷಗಳ ಕಾಲ ಶಿಕ್ಷೆ ಅನುಭವಿಸಿದ್ದರು (ಇಂತಹವರ ಹೆಸರು, ವಿವರ ನೀಡುವುದು);

ಇ) ಸನ್ನಡತೆಯ ಆಧಾರದ ಮೇಲೆ ಬಿಡುಗಡೆಯಾಗಿ ಹೊರ ಬರುವ ಖೈದಿಗಳು ಉತ್ತಮ ನಡತೆಯೊಂದಿಗೆ ಸಮಾಜದ ಮುಖ್ಯವಾಹಿನಿಗೆ ಸೇರ್ಪಡೆಯಾಗುವಲ್ಲಿ ಸರ್ಕಾರವು ಯಾವ ಪಾತ್ರಗಳನ್ನು ವಹಿಸುವುದು.

ಈ) ಇಂತಹವರ ಕಲ್ಯಾಣಕ್ಕೆ ಸರ್ಕಾರ ಯಾವುದಾದರೂ ಕಾರ್ಯಕ್ರಮಗಳನ್ನು ರೂಪಿಸುವುದೇ?